# ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ

## ಕರ್ನಾಟಕ ಸರ್ಕಾರ

ಸಂಖ್ಯೆ : ಕ.ಕೆಸಂ.ಅ.ಪ್ರಾ/ಬೆಂ/LDM/124/ರಿ.ಅ.ಸಂ:38401/2014/2020-21/926 · ದಿನಾಂಕ : 17.10.2022 20

## ಅಧಿಸೂಚನೆ

ವಿಷಯ : ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 2014 ರಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸುಪರ್ಧಿನಲ್ಲಿರುವ ಕೆರೆಗಳಿಗೆ "ಹೆಸರಿಸಲಾದ ಅಧಿಕಾರಿ" ಗಳನ್ನು (Designated Officer) ನೇಮಿಸುವ ಬಗ್ಗೆ

ಉಲ್ಲೇಖ:
1. ಸರ್ಕಾರದ ಅಧಿಸೂಚನೆ ಸಂಖ್ಯೆ : ಸಂವ್ಯಶಾಇ 19 ಶಾಸನ 2014 ಬೆಂಗಳೂರು ದಿನಾಂಕ: 06.09.2014
2. ಕರ್ನಾಟಕ ಸರೋವರ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಅಧಿಸೂಚನೆ ಸಂಖ್ಯೆ : ಕೆಎಲ್‌ಸಿಡಿಎ/25/ಇಎಸ್‌ಟಿ/2015-16/164 ದಿನಾಂಕ: 23.05.2016
3. ಮುಖ್ಯ ಅಭಿಯಂತರರು, ಕೆರೆಗಳು, ಬಿ.ಬಿ.ಎಂ.ಪಿ ರವರಿಗೆ ವಿಳಾಸಿಸಿ ಬರೆದಿರುವ ಈ ಕಛೇರಿ ಪತ್ರ ಸಂಖ್ಯೆ : ಕ.ಕೆಸಂ.ಅ.ಪ್ರಾ/ಬೆಂ/LDM/124/ರಿ.ಅ.ಸಂ:38401/2014/2020-21 /549ದಿನಾಂಕ: 02.08.2022
4. ಮುಖ್ಯ ಅಭಿಯಂತರರು, ಕೆರೆಗಳು, ಬಿ.ಬಿ.ಎಂ.ಪಿ ಬೆಂಗಳೂರು ರವರ ಪತ್ರ ಸಂಖ್ಯೆ : ಮು.ಅ./ಕೆರೆಗಳು/ ಪಿ.ಆರ್/377/2022-23 ದಿನಾಂಕ : 27.09.2022

* * *

**ಪ್ರಸ್ತಾವನೆ :**

ಉಲ್ಲೇಖ (1) ರಲ್ಲಿ ಹೇಳಿರುವ ಸರ್ಕಾರದ ಅಧಿಸೂಚನೆಯಂತೆ, ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 2014ನ್ನು ಜಾರಿಗೆ ತರಲಾಗಿದ್ದು, ಸದರಿ ಅಧಿನಿಯಮದ ಪ್ರಕರಣ 10 ರಂತೆ ಪ್ರಾಧಿಕಾರವು ಕೆರೆಗಳ, ಕೊಳಗಳ, ಸರೋವರಗಳ ರಕ್ಷಣೆ, ಸಂರಕ್ಷಣೆ ಮತ್ತು ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಹಾಗೂ ಯಾವುದೇ ಇತರ ಉದ್ದೇಶಕ್ಕಾಗಿ ಒಂದು ಅಥವಾ ಹೆಚ್ಚು ಕೆರೆಗಳ, ಕೊಳಗಳ, ಸರೋವರಗಳ ಉಸ್ತುವಾರಿಯನ್ನು ವಹಿಸಿಕೊಳ್ಳುವುದಕ್ಕಾಗಿ, ಯಾವೊಬ್ಬ ಅಧಿಕಾರಿಯನ್ನು 'ಹೆಸರಿಸಲಾದ ಅಧಿಕಾರಿ' ಯೆಂದು (Designated Officer) ಹೆಸರಿಸಬಹುದಾಗಿದೆ ಅಥವಾ ನೇಮಿಸಬೇಕಾಗಿರುತ್ತದೆ.

ನಿರಸನಗೊಂಡ ಕರ್ನಾಟಕ ಸರೋವರ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರವು ಉಲ್ಲೇಖ(2) ರಲ್ಲಿ ಬಿ.ಬಿ.ಎಂ.ಪಿ ವ್ಯಾಪ್ತಿಯ ಕೆರೆಗಳಿಗೆ Designated Officer & Empowered Officer ಗಳನ್ನು ನೇಮಿಸಿ ಹೊರಡಿಸಿದ್ದ ಅಧಿಸೂಚನೆ ಈವರೆಗೆ ಚಾಲ್ತಿಯಲ್ಲಿದ್ದು, ಪ್ರಸ್ತುತ ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 2014 ರ ಪ್ರಕರಣ (10) ರಂತೆ "ಹೆಸರಿಸಲಾದ ಅಧಿಕಾರಿ" ಗಳನ್ನು (Designated Officer) ನೇಮಿಸಬೇಕಾಗಿರುತ್ತದೆ ಹಾಗೂ ನಿರಸನಗೊಂಡ ಪ್ರಾಧಿಕಾರ ಹೊರಡಿಸಿರುವ ಅಧಿಸೂಚನೆ ಸಂಖ್ಯೆ : ಕೆಎಲ್‌ಸಿಡಿಎ/25/ಇಎಸ್‌ಟಿ/2015-16/164 ದಿನಾಂಕ : 23.05.2016ನ್ನು ಹಿಂಪಡೆದು, ಹೊಸದಾಗಿ ಅಧಿಸೂಚನೆ ಹೊರಡಿಸಬೇಕಾಗಿರುತ್ತದೆ.

ಈ ಕುರಿತು ಉಲ್ಲೇಖ (3) ರ ಪತ್ರದಲ್ಲಿ, ಮುಖ್ಯ ಅಭಿಯಂತರರು(ಕೆರೆಗಳು), ಬಿ.ಬಿ.ಎಂ.ಪಿ ರವರನ್ನು ಬೃಹತ್ ಪ್ರಸ್ತುತ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಕೆರೆಗಳಿಗೆ "ಹೆಸರಿಸಲಾದ ಅಧಿಕಾರಿ"ಗಳನ್ನು (Designated Officers) ನೇಮಿಸಲು ಪ್ರಸ್ತಾಪಿಸಿ, ಈ ಕಛೇರಿಗೆ ಮಾಹಿತಿ ಸಲ್ಲಿಸಲು ಕೋರಲಾಗಿತ್ತು. ಅದರಂತೆ, ಮುಖ್ಯ ಅಭಿಯಂತರರು (ಕೆರೆಗಳು), ಬಿ.ಬಿ.ಎಂ.ಪಿ ರವರು ಉಲ್ಲೇಖ ಪತ್ರ (4) ರಲ್ಲಿ 197 ಕೆರೆಗಳಿಗೆ ಪ್ರಸ್ತಾವನೆ/ವಿವರಗಳನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದ್ದು, ಅದರನ್ವಯ ಈ ಪ್ರಾಧಿಕಾರದ ಅಧಿನಿಯಮದಲ್ಲಿ ಸೂಚಿಸಿರುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿನ 197 ಕೆರೆಗಳಿಗೆ 'ಹೆಸರಿಸಲಾದ ಅಧಿಕಾರಿ' ಗಳನ್ನು ನೇಮಿಸಿ ಅದೇಶ ಹೊರಡಿಸಲು ಹಾಗೂ ನಿರಸನಗೊಂಡ ಪ್ರಾಧಿಕಾರ ಹೊರಡಿಸಿದ ಉಲ್ಲೇಖ (2) ರ ಅಧಿಸೂಚನೆ ಹಿಂಪಡೆಯಲು ತೀರ್ಮಾನಿಸಲಾಗಿದೆ. ಅದ್ದರಿಂದ, ಈ ಕೆಳಕಂಡ ಆದೇಶ.

......2

ನೆಲ ಮಹಡಿ, ಬೀಜ ಭವನ, ಬಳ್ಳಾರಿ ರಸ್ತೆ, ಹೆಬ್ಬಾಳ, ಬೆಂಗಳೂರು-560024.
ದೂರವಾಣಿ: 080-23513711/12, ಈಮೇಲ್-ktcda2018@gmail.com